**ದಿನಾಂಕಃ 22-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಹೆಚ್ ಎಮ್ ಎಸ್ ವಕೀಲರಿಂದಃ**

ನಾನು ಹಿರಿಯ ವಕೀಲರಾದ ಸಿ ಎಮ್ ಕುಲಕರ್ಣಿ ರವರ ಬಳಿ 1985 - 1990 ರವರೆಗೆ ಸಹಾಯಕ ವಕೀಲನಾಗಿ ಕೆಲಸ ಮಾಡಿರುತ್ತೇನೆ. ನಾನು ಸದರಿಯವರೊಂದಿಗೆ ಸಹಾಯಕನಾಗಿ ಕೆಲಸ ಮಾಡುವಾಗಲೂ ಮತ್ತು ನಂತರದಲ್ಲಿಯೂ ಸಹ ಸ್ವತಂತ್ರವಾಗಿ ವಕೀಲಕಿಯನ್ನು ಮಾಡಿರುತ್ತೇನೆ. ನಾನು 1990 ರ ನಂತರವೂ ಸಹ ಸದರಿ ಕುಲಕರ್ಣಿ ವಕೀಲರೊಂದಿಗೆ ಸಂಪರ್ಕದಲ್ಲಿದ್ದೇನು ಮತ್ತು ಅವರ ಕಚೇರಿಯ ಮೇಲ್ವಿಚಾರಣೆಯನ್ನು ಮಾಡುತ್ತಿದ್ದೇನು. ನಾನು 1995 ರವರೆಗೂ ಸಹ ಅವರ ಕಚೇರಿಯ ಮೇಲ್ವಿಚಾರಣೆಯನ್ನು ನೋಡಿಕೊಂಡಿರುತ್ತೇನೆ. 1995 ರ ನಂತರ ಅವರ ಕಚೇರಿಗೂ ನಾನು ಹೋಗಿಲ್ಲ ಮತ್ತು ಅವರ ಕಚೇರಿಗೆ ಸಂಬಂದಪಟ್ಟ ವ್ಯವಹಾರಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಅಥವಾ ತಿಳವಳಿಕೆ ಇಲ್ಲ. ಸದರಿ ಕುಲಕರ್ಣಿ ವಕೀಲರು ತೀರಿಕೊಳ್ಳುವ 12 ವರ್ಷದ ಪೂರ್ವದಲ್ಲಿ ನ್ಯಾಯಾಲಯದ ಕಲಾಪಗಳಿಗೆ ಅನರೋಗ್ಯದ ಕಾರಣ ನ್ಯಾಯಾಲಯಕ್ಕೆ ಹಾಜರಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. 4 - 5 ವರ್ಷಗಳಿಂದ ಬಿಟ್ಟಿದ್ದರು ವಕೀಲಿಕಿಯನ್ನು ಸರಿಯಾಗಿ ಮಾಡುತ್ತಿದ್ದರು.

2. ಪ್ರಸ್ತುತ ಪ್ರಕರಣದಲ್ಲಿಯ ವಾದಿ ಮತ್ತು ಪ್ರತಿವಾದಿಯರ ಪರಿಚಯವಿದೆ. ವಾಸುದೇವ ಹೆಬ್ಬಾರ ರವರ ಮನೆ ನಮ್ಮ ಮನೆಯ ಹಿಂದೆ ಇರುತ್ತದೆ. ನಿ ಪಿ -2 ನ್ನು ಬರೆಯುವ ಸಮಯದಲ್ಲಿ ನಾನು ಇರಲಿಲ್ಲ. ವಾಸುದೇವ ಹೆಬ್ಬಾರ ರವರು ರಾಮಚಂದ್ರ ಉಪಾಧ್ಯಯರಿಗೆ ಮೃತ್ಯು ಪತ್ರವನ್ನು ನನ್ನ ಸಮಕ್ಷಮ ಬರೆದುಕೊಟ್ಟಿಲ್ಲ ಮತ್ತು ಅದರಲ್ಲಿ ಸಹಿ ಹಾಕಿರುವ ಮೃತ್ಯುಪತ್ರ ಬರೆದುಕೊಟ್ಟವರಾಗಲೀ , ಬರೆಸಿಕೊಂಡವರಾಗಲಿ ಹಾಗೂ ಸಾಕ್ಷಿದಾರರಾಗಲಿ ನನ್ನ ಸಮಕ್ಷಮ ಸಾಕ್ಷಿ ಮಾಡಿರುವುದಿಲ್ಲ ಎಂದರೆ ಸರಿ. ರಾಮಚಂದ್ರ ಉಪಾಧ್ಯಯರು ಹಿರಿಯ ನ್ಯಾಯವಾದಿಗಳಾದ ಸಿ ಎಮ್ ಕುಲಕರ್ಣಿ ರವರ ಕಕ್ಷಿದಾರರು ಆಗಿದ್ದರು ಎಂದರೆ ಸರಿ. ಸ್ವ ಇಚ್ಛೆಯಿಂದ ಸಾಕ್ಷಿಯಿಯೂ ವಾಸುದೇವ ಹೆಬ್ಬಾರ ರವರು ಸಹ ಅವರ ಕಕ್ಷಿದಾರರು ಇದ್ದರು ಎಂದು ನುಡಿಯುತ್ತಾರೆ. 1995 ರ ನಂತರ ಸದರಿ ಸಿ ಎಮ್ ಕುಲಕರ್ಣಿ ರವರು ಹೇಗೆ ಸಹಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರ ಉಪಾಧ್ಯಯರವರು ನನಗೂ ಸಹ ಕಕ್ಷಿದಾರರಾಗಿರುವುದರಿಂದ ಅವರಿಗೆ ಸಹಾಯವಾಗಲೆಂದು ಸಿ ಎಮ್ ಕುಲಕರ್ಣಿ ರವರು ನಿ ಪಿ -2 ಕ್ಕೆ ಸಹಿ ಹಾಕಿದ್ದಾರೆ ಎಂದು ಅವರ ಸಹಿಯನ್ನು ಗುರುತಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1995 ರಲ್ಲಿ ನಾನು ಸಿ ಎಮ್ ಕುಲಕರ್ಣಿ ರವರ ನೋಡಿದಂತಹ ಸಹಿಯೂ ಹಾಗೂ ನಿ ಪಿ -2 ರಲ್ಲಿ ಸಿ ಎಮ್

ಕುಲಕರ್ಣಿ ರವರ ಸಹಿಯಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ವಾದಿಯೂ ನಿ ಪಿ -2 ವಿಲ್ ನ್ನು ಸೃಷ್ಠಿ ಮಾಡಿ ಅದಕ್ಕೆ ಸಿ ಎಮ್ ಕುಲಕರ್ಣಿ ರವರ ಸಹಿಯನ್ನು ಸೃಷ್ಠಿಸಿ ಹಾಕಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.